ಮಾಡದೆ ಬೇಗ ಮಾಡುತ್ತದೆಯೇ ;

ಶ್ರೀ ಎಸ್. ಆರ್. ಬೊಮ್ಮಾಯಿ.—ಕೇಂದ್ರ ಸರ್ಕಾರ ಕೆಲವೊಂದು ಮಾಹಿತಿಗಳನ್ನು ಕೇಳಿರುವುದರಿಂದ, ನಮ್ಮ ಸರ್ಕಾರ ಹೈಕೋರ್ಟ್‌ಗೆ ಕೆಲವು ಮಾಹಿತಿಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡಿದೆ.

ಗಜೇಂದ್ರಗಡದ ಆಸ್ಪತ್ರೆಗೆ ಅಡಿಗಲ್ಲು ಹಾಕಿರುವ ಬಗ್ಗೆ

174. ಶ್ರೀ ಜ್ಞಾನದೇವ ದೊಡ್ಡ ಮೇಟಿ(ರೋಣ).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :

ಅ) ಧಾರವಾಡ ಜಿಲ್ಲೆ ರೋಣ ತಾಲ್ಲೂಕು ಗಜೇಂದ್ರಗಡದ ನಗರದಲ್ಲಿ ಆಸ್ಪತ್ರೆಯ ಕಟ್ಟಡಕ್ಕೆ ಹಿಂದಿನ ಸಚಿವರೊಬ್ಬರು ಅಡಿಗಲ್ಲನ್ನು ಇಟ್ಟಿದ್ದು ನಿಜವೇ ;

ಆ) ಹಾಗಿದ್ದಲ್ಲಿ ಸದರಿ ಆಸ್ಪತ್ರೆಯ ಕಟ್ಟಡ ಕಟ್ಟಲು ಪ್ರಾರಂಭಿಸದಿರುವುದಕ್ಕೆ ಕಾರಣಗಳೇನು ;

ಇ) ಈಗಲಾದರೂ ಈ ಕಟ್ಟಡದ ಕೆಲಸವನ್ನು ಬೇಗ ಪೂರ್ತಿಗೊಳಿಸಲು ಸರ್ಕಾರದವರು ಕಾರ್ಯಕ್ರಮ ಕೈಗೊಳ್ಳುವರೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಸಚಿವರು):--

ಅ) ಹೌದು.

ಆ) ಅಗತ್ಯವಾದ ಕ್ರಮಗಳು ಪೂರ್ತಿಗೊಳ್ಳದಿರುವುದರಿಂದ.

ಇ) ಹೌದು.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಅಧ್ಯಕ್ಷರೆ, ನಾನು ಕೇಳಿರುವೆದು ಅಡಿಗಲ್ಲನ್ನು ನೆಟ್ಟಿದ್ದು ನಿಜವೇ ಎಂದು. ಆದರೆ ಪ್ರಶ್ನೋತ್ತರ ಪಟ್ಟಿಯಲ್ಲಿ ಇಟ್ಟಿದ್ದು ನಿಜವೇ ಎಂದು ಮುದ್ರಣವಾಗಿದೆ. ನೆಟ್ಟಿದ್ದು, ಮತ್ತು ಇಟ್ಟಿದ್ದು ಎನ್ನುವುದಕ್ಕೆ ಅರ್ಥವ್ಯತ್ಯಾಸವಾಗುತ್ತದೆ. ಗಿಡ, ಸಸಿ, ಇವುಗಳು ನೆಡುವಂಥಾದ್ದು. ಅಡಿಗಲ್ಲನ್ನು ನೆಡುವುದು ಎಲ್ಲಿ ಕಾಣಲಿಲ್ಲ. ಈ ಆಸ್ಪತ್ರೆಯ ಕಟ್ಟಡಕ್ಕೆ ಅಡಿಗಲ್ಲು ಏನು ಇಟ್ಟಿದ್ದಾರೆ, ಇದನ್ನು ನೆಲದ ಮೇಲೆ ಇಟ್ಟಿದ್ದಾರೋ, ಅಥವಾ ಇದು ನೆಲದ ಕೆಳಕ್ಕೆ ಸೇರಿದೆಯೋ ಹೇಗೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—1982ನೇ ಇಸವಿ 11ನೇ ತಿಂಗಳಿನಲ್ಲಿ ಹಿಂದಿನ ಆರೋಗ್ಯ ಮಂತ್ರಿಗಳು ಈ ಅಡಿಗಲ್ಲನ್ನು ಹಾಕಿದ್ದಾರೆ. ಕಳೆದ ಬಜೆಟ್‌ನಲ್ಲಿ 2 ಲಕ್ಷ ರೂಪಾಯಿ ಇಟ್ಟಿದ್ದರೂ ಅದನ್ನು ಉಪಯೋಗಿಸಿಕೊಂಡಿಲ್ಲ. ಈ ವರ್ಷದ ಬಜೆಟ್‌ನಲ್ಲಿ ಇದಕ್ಕೋಸ್ಕರ ಐದೂವರೆ ಲಕ್ಷ ರೂಪಾಯಿ ಇಟ್ಟಿದ್ದೇವೆ. ಅತಿ ಶೀಘ್ರದಲ್ಲಿಯೇ ಈ ಆಸ್ಪತ್ರೆಯ ಕೆಲಸ ಪ್ರಾರಂಭ ಮಾಡಲಿಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಇಷ್ಟು ವಿಳಂಬ ಆಗಲಿಕ್ಕೆ ಕಾರಣ ಏನು ಎನ್ನುವುದನ್ನು ಮಾನ್ಯ ಆರೋಗ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಸ್ವಾಮಿ, ಇದು ತಡವಾಗುವುದಕ್ಕೆ ಕಾರಣವಾದರೂ ಏನು ? ನಮಗೆ ಎಲ್ಲ ವಿಚಾರವೂ ಗೊತ್ತಿದೆ. ಆದ್ದರಿಂದ ತಾವು ವಿಚಾರ ಏನೆಂಬುದನ್ನು ಹೇಳಿದರೆ ಸಾಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹೋದ ವರ್ಷದ ಆಯವ್ಯಯದಲ್ಲಿ ಈ ಬಾಬಿಗೋಸ್ಕರ 2 ಲಕ್ಷ ರೂ ಇಟ್ಟಿದ್ದಾರೆ. ಇದರ ಬಗ್ಗೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಪ್ರೊಸೆಸಿಂಗ್ ಆಗಬೇಕಾದರೆ ಸ್ವಲ್ಪ ತಡವಾಗಿದೆ. ಈ ವರ್ಷದಲ್ಲಿ ನಾವು 5.50 ಲಕ್ಷ ರೂ. ಇಟ್ಟಿದ್ದೇವೆ. ಆದಷ್ಟು ಶೀಘ್ರವಾಗಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಸ್ವಾಮಿ, ಅಲ್ಲಿ ನೆಲದ ತೊಡಕು ಇದೆ. ಆದರೂ ಈ ಅಡಿಗಲ್ಲನ್ನು ಏತಕ್ಕೆ ಇಟ್ಟರು ? ಆ ಜಮೀನಿನ ಬಗ್ಗೆ ತಕರಾರು ಇದ್ದುದು ನಿಮಗೆ ಗೊತ್ತಿರಲಿಲ್ಲವೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆ ಜಮೀನಿನ ವಿಚಾರದಲ್ಲಿ ತೊಡಕು ಇದ್ದುದು ನಮ್ಮ ಗಮನಕ್ಕೆ ಬಂದಿರಲಿಲ್ಲ. ಈಗ ತಾವು ನಮ್ಮ ಗಮನಕ್ಕೆ ತಂದಿದ್ದೀರಿ. ಈ ದಿಸೆಯಲ್ಲಿ ನಾವು ತೀವ್ರ ಕ್ರಮ ತೆಗೆದುಕೊಂಡು ಸಮಸ್ಯೆಯನ್ನು ಪರಿಹಾರಮಾಡುತ್ತೇವೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಇನ್ನು ಮುಂದಾದರೂ ನಮ್ಮ ಸರ್ಕಾರ ಇಂಥ ಅಡಿಗಲ್ಲು ಸಮಾರಂಭಗಳನ್ನು ಮಾಡುವುದಾಗಲಿ, ಅಥವಾ ಇಂಥ ಅರ್ಧಂಬರ್ಧ ಕೆಲಸವನ್ನು ಮಾಡುವುದಾಗಲಿ, ಮಾಡಬಾರದೆಂದು ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆಗಬಹುದು.

ರಾಜ್ಯದಲ್ಲಿ ವೈದ್ಯಕೀಯ ಕಾಲೇಜುಗಳ ಬಗ್ಗೆ

175. ಶ್ರೀ ರಾಮಚಂದ್ರ ವೀರಪ್ಪ(ಹುಲಸೂರು).— ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಸರಕಾರದಿಂದ ನಡೆಸುತ್ತಿರುವ ವೈದ್ಯಕೀಯ ಕಾಲೇಜುಗಳು ಎಷ್ಟು, ಪೆಸರೇನು ಮತ್ತು ಎಲ್ಲಿ ಇರುತ್ತವೆ ;

ಬ) ಕರ್ನಾಟಕ ರಾಜ್ಯದಲ್ಲಿ ಖಾಸಗಿಯಾಗಿ, ನಡೆಸುತ್ತಿರುವ ವೈದ್ಯಕೀಯ ಕಾಲೇಜುಗಳು ಎಷ್ಟು, ಅವುಗಳ ಸ್ಥಳ ಮತ್ತು ಹೆಸರು ;

ಇ) ಖಾಸಗಿ ಸಂಘ ಸಂಸ್ಥೆಗಳು ವೈದ್ಯಕೀಯ ಕಾಲೇಜನ್ನು ಹೊಸದಾಗಿ ಸ್ಥಾಪಿಸಲಿಕ್ಕೆ ಅನುಮತಿ ಕೇಳಿದ್ದಾರೆಯೇ ;

ಈ) ಹಾಗಾದರೆ ಅದಕ್ಕೆ ಅನುಮತಿಯನ್ನು ಕೊಟ್ಟಿದ್ದಾಗಿದೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಸಚಿವರು):—

ಅ) ಸರಕಾರದಿಂದ ನಡೆಸುತ್ತಿರುವ ವೈದ್ಯಕೀಯ ಕಾಲೇಜುಗಳು ನಾಲ್ಕು, ಅವುಗಳ ವಿವರ ಈ ರೀತಿ ಇದೆ. 1. ಬೆಂಗಳೂರು ವೈದ್ಯಕೀಯ ಕಾಲೇಜು, ಬೆಂಗಳೂರು.
2. ಸರಕಾರಿ ವೈದ್ಯಕೀಯ ಕಾಲೇಜು, ಬಳ್ಳಾರಿ.
3. ಸರಕಾರಿ ವೈದ್ಯಕೀಯ ಕಾಲೇಜು, ಮೈಸೂರು.
4. ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ.

ಬ) ಕರ್ನಾಟಕ ರಾಜ್ಯದಲ್ಲಿ ಖಾಸಗಿಯಾಗಿ ನಡೆಸುತ್ತಿರುವ ವೈದ್ಯಕೀಯ ಕಾಲೇಜುಗಳು 8 ಮತ್ತು ಅವುಗಳ ವಿವರ ಈ ರೀತಿ ಇದೆ :

1. ಬೆಂಗಳೂರು ಕೆಂಪೇಗೌಡ ಇನ್ಸ್‌ಟ್ಯೂಟ್ ಆಫ್ ಮೆಡಿಕಲ್ ಸೈಯನ್ಸ್.
2. ಬೆಂಗಳೂರು ಡಾ॥ಅಂಬೇಡ್ಕರ್ ಮೆಡಿಕಲ್ ಕಾಲೇಜು.
3. ಬೆಂಗಳೂರು ಎಂ. ಎಸ್. ರಾಮಯ್ಯ ಮೆಡಿಕಲ್ ಕಾಲೇಜು.
4. ಬೆಂಗಳೂರು ಸೆಂಟ್ ಜಾನ್ಸ್ ಮೆಡಿಕಲ್ ಕಾಲೇಜು.
5. ದಾವಣಗೆರೆ ಜೆ. ಜೆ. ಎಂ. ಮೆಡಿಕಲ್ ಕಾಲೇಜು.
6. ಬೆಂಗಳೂರು ಜೆ. ಎನ್. ಮೆಡಿಕಲ್ ಕಾಲೇಜು.
7. ಬೆಳಗಾಂವ ಜೆ. ಎನ್. ಮೆಡಿಕಲ್ ಕಾಲೇಜು.
8. (ಅ) ಮಂಗಳೂರು ವಿಭಾಗ ಕಸ್ತೂರಬಾ ಮೆಡಿಕಲ್ ಕಾಲೇಜು.
(ಬ) ಮಣಿಪಾಲ ವಿಭಾಗ ಕಸ್ತೂರಬಾ ಮೆಡಿಕಲ್ ಕಾಲೇಜು.

ಇ) ಖಾಸಗಿ ಸಂಸ್ಥೆಗಳು 1981-82, 1982-83 ಮತ್ತು 1983-84ರ ಸಾಲಿಗೆ ವೈದ್ಯಕೀಯ ವಿದ್ಯಾಲಯವನ್ನು ಸ್ಥಾಪಿಸಲು ಅನುಮತಿಯನ್ನು ಕೇಳಿದ್ದರು ಅವುಗಳ ಪಟ್ಟಿಯನ್ನು ಲಗತ್ತಿಸಿದೆ.

ಈ) ಇಲ್ಲ.

1981-82

1.	No. HFW 3 MME 81	Permission to start Dr. Hardikar Memorial Rural Medical College at Ghataprabha from Karnataka law Society, Belgaum.
2.	No. HFW 4 MME 81	Starting of Medical College in Bhalki Shanthivardaka Education Society, Bhalki, Bidar Dist,
3.	No. HFW 5 MME 81	Grant for Sanjay Gandhi Memorial Medical College, Mysore by Organising Society S. G. M. Medical College, Mysore.
4.	No. HFW 6 MME 81	Starting of New Medical College in Karnataka by the General Practitioners Association, Hubli.
5.	No. HFW 7 MME 81	Request to Grant of Permission to start a Medical College at Bangalore Islamic Mission of India, Hosur Road, Bangalore-27
6.	HFW 11 MME 81	Opening of New Medical Colleges in this State represented by under graduates and P. G. Students Bangalore Medical College, Bangalore.

7.	HFW 27 MME 81	Regarding starting of Medical College by Anjuman-E-Islam-Ilkal, District Bijapur.
8.	HFW 51 MME 81	Permission to start the Medical College at Shimoga and other places requested by Backward Class Development Foundation B'lore. Bangalore.
9.	HFW 65 MME 81	Permission to start Medical College at Kolar under the auspicious of Al-Ehsan Foundation.
10.	HFW 67 MME 81	Starting of Medical College at Raichur under the auspicious of Sri Raghavendra Education Trust, Raichur.
11.	HFW 71 MME 81	Regarding grant of permission to start the Medical College and Dental College at Bangalore from the year 1981-82 by the Mahatma Gandhi Vidyapeetha.
12.	HFW 72 MME 81	Grant of permission for opening of Kailani Medical College at Mysore
13.	HFW 74 MME 81	Starting of Sharada Dhanvanthari Hostel institute of Medical Sciences at Sringeri
14.	HFW 75 MME 81	Grant of permission to open Medical College to Guru Nanak Dev Medical College at Bidar.
15.	HFW 119 MME 81	Starting of Medical College at Ananthapur.
16.	HFW 185 MME 81	Starting the Medical College by the Rural Technical Educaticn Society. Hulkoti.
17.	HFW 199 MME 81	Grant of affiliation to start Dr. Ambedkar Medical College in Bangalore by D Thameral Kannan, Memorial Institute, Bangalore.
18.	HFW 213 MME 81	Starting of Medical College at Bagalkot by Sri, Basaveswara Vidyavardhaka Sangha, Bagalkot.

1982-83

1.	HFW 32 MME 82	Request for the grant of permission to start a Medical College at Mysore under the auspicious of J. J. S. Maha Vidya Peetha, Mysore.
2.	HFW 86 MME 82	Sanction of Medical College and Dental College at Mahatma Gandhi Vidyapeetha, Bangalore.

3.	HFW 89 MME 82	Regarding grant of permission to Sri Siddaganga Education Society, Tumkur to start Medical College at Tumkur.
4.	HFW 96 MME 82	Requesting for sanction of Medical College to be run by the Sanghameswara Vidya Samithi at Shimoga.
5.	HFW 99 MME 82	Request for grant of permission for starting of a Medical College at Hubli by Al-Meezan Educational Association, Hubli.
6.	HFW 101 MME 82	Grant of Farmers Medical College at Nandikoor, Dakshina Kannada District.
7.	HFW 103 MME 82	Sanction of Medical College for Sirsi (N.K.) Request by Smt. Anasuya G, Sharma, MLA.
8.	HFW 126 MME 82	Permission for starting of Medical College at Raichur or Bidar.
9.	HFW 128 MME 82	Establishment of Medical College by the people belong to B. C. and Minority Communities.

1983-84

1.	HFW 24 MME 83	Regarding Grant of permission to Veera Soudha Trust to start a Medical and Dental College at Bangalore.

ಶ್ರೀ ಭೀಮಣ್ಣ ಖಂಡ್ರೆ ಮಾನ್ಯ ರಾಮಚಂದ್ರ ವೀರಪ್ಪ (ಹುಲ್‌ಸೂರ್) ಇವರ ಪರವಾಗಿ.—ಮಾನ್ಯ ಅಧ್ಯಕ್ಷರೆ, ಇದರಲ್ಲಿ ಇನ್ನೊಂದು ಕಾಲೇಜಿನ ಹೆಸರು ಬರಲಿಲ್ಲ. ನೀವು ಎಷ್ಟು ಸೀಟುಗಳನ್ನು ಪೆಚ್ಚಿಗೆ ಮಾಡಿದ್ದೀರಿ ಎಂಬುದನ್ನು ಕೂಡ ಹೇಳಬೇಕು.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಶ್ನೆ ಕೇಳುವ ವಿಧಾನವೆ ಇದು ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ,.....

ಉಪಾಧ್ಯಕ್ಷರು.—ಸ್ವಾಮಿ, 175ನೇ ಪ್ರಶ್ನೆ ಮುಗಿದುಹೋಯಿತು. ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು.

ಮೈಸೂರು ಜಿಲ್ಲೆಯ ಪಿ. ಹೆಚ್. ಯು. ಆಸ್ಪತ್ರೆಗಳಲ್ಲಿ ಇರುವ ವೈದ್ಯರ ಬಗ್ಗೆ

176. ಶ್ರೀ ಕಾಳಮರಿಗೌಡ (ಪಿರಿಯಪಟ್ಟಣ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಮೈಸೂರು ಜಿಲ್ಲೆಯಲ್ಲಿ ಎಷ್ಟು ಪಿ. ಹೆಚ್. ಯು. ಆಸ್ಪತ್ರೆಗಳಿವೆ ;

ಆ) ಎಷ್ಟು ಆಸ್ಪತ್ರೆಗಳಲ್ಲಿ ಡಾಕ್ಟರುಗಳಿದ್ದಾರೆ, ಎಷ್ಟರಲ್ಲಿ ಇಲ್ಲ;

ಇ) ಪಿರಿಯಾಪಟ್ಟಣ ತಾಲ್ಲೂಕಿನ ಎಷ್ಟು ಪಿ. ಹೆಚ್. ಯು ಮತ್ತು ಪಿ. ಹೆಚ್. ಸಿ. ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲದಿರುವುದು ಕಾರಣವೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಸಚಿವರು) :—

ಅ) 84 ಆರೋಗ್ಯ ಘಟಕಗಳು ಇವೆ.

70ರಲ್ಲಿ ಇದ್ದಾರೆ, 14ರಲ್ಲಿ ಇಲ್ಲ.

ಆ) (i) ಪಿ. ಹೆಚ್. ಯು. ಆಸ್ಪತ್ರೆಗಳು...3ರಲ್ಲಿ ಇಲ್ಲ.

(ii) ಪಿ. ಹೆಚ್. ಸಿ....1 ಇಲ್ಲಿ ಇದ್ದಾರೆ.

ಇ) ಖಾಲಿ ಇರುವ ಜಾಗಗಳನ್ನು ತುಂಬಲು ಲೋಕ ಸೇವಾ ಆಯೋಗದಿಂದ ಆಯ್ಕೆಯಾದ ಡಾಕ್ಟರರ ಪಟ್ಟಿಯನ್ನು ಕಾಯಲಾಗಿದೆ.

ಶ್ರೀ ಕೆ. ಎಸ್. ಕಾಳಮರಿಗೌಡ.—ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಯಲ್ಲಿ 84 ಪಿ. ಹೆಚ್.ಯು.